**CW : 5**

PW : 5

ಹೆಚ್ಚುವರಿ  ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1094/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಗಿರೀಶ್ |
| ತಂದೆಯ ಹೆಸರು | : | ಮುದರ |
| ಪ್ರಾಯ | : | 31 ವರ್ಷ |
| ಉದ್ಯೋಗ | | ಕೂಲಿ ಕೆಲಸ |
| ವಾಸಸ್ಥಳ | : | ಬಿಂತೋಡಿ ಮನೆ, ಮಾಡ್ನೂರು ಗ್ರಾಮ |

ದಿನಾಂಕಃ**22.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ  ಮಾನ್ಯ  ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ 2 ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿನ ತನ್ನ ಸಹಿಗಳನ್ನು ಗುರುತಿಸಿದ್ದು ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-2 ಹಾಗೂ 3 ಎಂದು ಗುರುತಿಸಲಾಗಿದ್ದು ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-2ಸಿ ಹಾಗೂ 3 ಸಿ ಎಂದು ಕ್ರಮವಾಗಿ ಗುರುತಿಸಲಾಯಿತು. ನಿಪಿ.2 ಮತ್ತು 3 ಕ್ಕೆ ನಾನು ಆಗಸ್ಟ್ ಮಾಹೆ 2023 ರಂದು ವಿಷ್ಣು ಕಲ್ಲೂರಾಯ ಎನ್ನುವವರಿಗೆ ಸೇರಿದ ಗೋಡೋನ್ ನಲ್ಲಿ ಸಹಿ ಮಾಡಿದ್ದೇನೆ. ಸ್ಥಳಕ್ಕೆ ಆ ದಿನ ಪೊಲೀಸರು ಸ್ಥಳ ಮಹಜರು ಮಾಡುವ ಸಲುವಾಗಿ ಬಂದಿದ್ದರು. ಗೊಡೋನ್ ನಲ್ಲಿ ಕಳ್ಳತನವಾಗಿತ್ತು. ಪೊಲೀಸರು ಹುಲ್ಲಿನ ಒಳಗೆ ಇದ್ದ ಬೀಗವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ತೆಗೆದುಕೊಂಡು ಹೋದರು. ನನ್ನ ಸಂಗಡ ನಿಪಿ-2 ಮತ್ತು 3 ದಾಖಲೆಗಳಿಗೆ ಗೋಪಾಲ ಮೂಲ್ಯ ಎನ್ನುವವರು ಸಹಿ ಮಾಡಿದ್ದಾರೆ.

ನನ್ನ ಸಮಕ್ಷಮ ಪೊಲೀಸರು ವಶಪಡಿಸಿಕೊಂಡ ಬೀಗವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಲಾದ ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃಆರೋಪಿತರ ಪರ ಶ್ರೀ  ಎಮ್ ಪಿ ಕೆ  ವಕೀಲರಿಂದಃ

ನಾನು ವಿಷ್ಣು ಕಲ್ಲೂರಾಯರವರ ಮನೆಗೆ ಪ್ರತೀದಿನವೂ ಕೆಲಸಕ್ಕೆ ಹೋಗುತ್ತೇನೆ. ಪೊಲೀಸರು ಸ್ಥಳಕ್ಕೆ ಬರುವ ಮೊದಲು ನಾನು ಸ್ಥಳದಲ್ಲಿ ಬೀಗ ಅಥವಾ ಕೀ ಬಿದ್ದಿದ್ದನ್ನು ನೋಡಿಲ್ಲ. ಮು ಮಾ -1

ನ್ನು ನನಗೆ ಪೋಲೀಸರು ತೋರಿಸಿದ್ದರು. ನಾನು ಸಹಿ ಮಾಡಿದ್ದ ದಾಖಲೆಗಳಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ದಾಖಲೆಗಳಿಗೆ 12.30 ಕ್ಕೆ ಸಹಿ ಮಾಡಿದ್ದೇನೆ. ಅದಕ್ಕೂ ಮೊದಲು ಪೊಲೀಸರು ಏನೆಲ್ಲಾ ಮಾಡಿದ್ದರು ಎಂದು ಗೊತ್ತಿಲ್ಲ. ನಾನು ಚಾಸಾ-1 ರವರ ಮನೆಗೆ ಕೆಲಸಕ್ಕೆ ಹೋಗುವ ಕಾರಣ ಅವರ ಮಾತು ಕೇಳಿಕೊಂಡು ನಿಪಿ-2 ಮತ್ತು 3 ದಾಖಲೆಗಳ ಸಂಬಂಧಿತವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.